**ಸಾಕ್ಷಿಯನ್ನು ದಿನಾಂಕ 17.2 .2024 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಮುಖ್ಯ ವಿಚಾರಣೆಃ ಅರ್ಜಿದಾರರ ಪರ ವಕೀಲರಿಂದಃ

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು, ಅದರಲ್ಲಿರುವ ಅಂಶಗಳು ಸತ್ಯವಾಗಿದ್ದು ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ. ನಾನು ಹಲವು ದಾಖಲೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಈ ಕೆಳಕಂಡಂತೆ ನೋಡಿ ಗುರುತಿಸುತ್ತಿದ್ದೇನೆ. ಟಿ.ಎನ್.ಬಾಲಕೃಷ್ಣಗೌಡ ಇವರು ನೀಡಿರುವ ಆಥರೈಷನ್ ಲೆಟರನ್ನು ನಿಪಿ134 ಎಂದು, ಡಿಸ್‌ಎಬಿಲಿಟಿ ಸರ್ಟಿಪಿಕೆಟ್ ಮತ್ತು ಅದಕ್ಕೆ ಲಗತ್ತಿಸಿದ ಮೂರು ದಾಖಲಾತಿಗಳನ್ನು ಒಟ್ಟಾಗಿ ನಿಪಿ135 ಎಂದು, ಹತ್ತು ಎಕ್ಸರೇ ಫಿಲಂಗಳನ್ನು ಒಟ್ಟಾಗಿ ನಿಪಿ136 ಎಂದು, ಹದಿನೇಳು ಸಿ.ಟಿ ಸ್ಕ್ಯಾನ್ ಫಿಲಂಗಳನ್ನು ಒಟ್ಟಾಗಿ ನಿಪಿ137 ಎಂದು, ಡಿಸ್‌ಚಾರ್ಜ ಸಮ್ಮರಿಯನ್ನು ನಿಪಿ138 ಎಂದು, ಕೇಸ್ ಶೀಟನ್ನು (150 ಪುಟ) ನಿಪಿ139 ಎಂದು, ಅಪೋಲೋ ಬಿ.ಜಿ.ಎಸ್ ಆಸ್ಪತ್ರೆಗೆ ಸಂಬಂಧಪಟ್ಟ ಓ.ಪಿ.ಡಿ ಪಾಲೋಅಫ್‌ನ್ನು (11 ಪುಟ) ನಿಪಿ140 ಎಂದು, ಬಿ.ಕೆ.ಜಿ ಡಯಗ್ನಾಸಿಸ್ ಅಂಡ್ ಹೆಲ್ತ್ ಕೇರ್ ಆಸ್ಪತ್ರೆಗೆ ಸಂಬಂಧಪಟ್ಟ ಓ.ಪಿ.ಡಿ ಪಾಲೋಅಫ್‌ನ್ನು (3 ಪುಟ) ನಿಪಿ141 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ 1 ರಿಂದ 3 ನೇ ಎದುರುದಾರರ ಪರ ಎ.ಜಪಿ.ಪಿ ರವರಿಂದಃ

ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿ ಹೇಳಿರುವ ವಿಚಾರಗಳನ್ನು ನಾನೇ ಹೇಳಿ ಬರೆಸಿರುತ್ತೇನೆ. ಡಿಸ್‌ಚಾರ್ಜ ಸಮ್ಮರಿಯಲ್ಲಿ ಹೆಚ್.ಓ.ಡಿ ರವರು ಗಾಯದ ಪ್ರಮಾಣ, ಗಾಯದ ಸ್ವಭಾವ, ಡಿಸ್‌ಎಬಿಲಿಟಿ ಪ್ರಮಾಣವನ್ನು ವಿವರವಾಗಿ ನಮೂದು ಮಾಡಬೇಕು ಎಂದರೆ ಸರಿ. ಅರ್ಜಿದಾರರು ಚಿಕಿತ್ಸೆ ಪಡೆದ ಸಮಯದಲ್ಲಿ ಡಾಃ ಟಿ.ಎನ್.ಬಾಲಕೃಷ್ಣಗೌಡ ರವರು ಹೆಚ್.ಓ.ಡಿ ಆಗಿದ್ದರು ಎಂದರೆ ಸರಿ. ಓ.ಪಿ.ಡಿ ಯಲ್ಲಿ ಪ್ರತಿದಿನ ಬೇರೆ ಬೇರೆ ಹೆಚ್.ಓ.ಡಿ ಇರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿದಾರರು ಮುಂದುವರಿದು ಒಬ್ಬರೇ ಹೆಚ್.ಓ.ಡಿ ಇದ್ದು ಅವರ ಕೆಳಗೆ ಬೇರೆ ಬೇರೆ ವೈದ್ಯರು ಚಿಕಿತ್ಸೆ ನೀಡುತ್ತಾರೆ ಎನ್ನುವರು. ಡಿಸ್‌ಎಬಿಲಿಟಿ ಪ್ರಮಾಣಪತ್ರದಲ್ಲಿ ನಮೂದಿಸಿರುವ ವಿಚಾರಗಳ ಬಗ್ಗೆ ಸಾಕ್ಷಿ ನುಡಿಯಲು ಹೆಚ್.ಓ.ಡಿ ಮತ್ತು ಗಾಯಾಳುವಿಗೆ ಚಿಕಿತ್ಸೆ ನೀಡಿದ ವೈದ್ಯರು ಸೂಕ್ತ ವ್ಯಕ್ತಿಗಳು ಎಂದರೆ ಸರಿ. ನಾನು ನಿಪಿ140 ರಲ್ಲಿ ನಮೂದಿಸಿರುವ ದಿನಾಂಕ 30.12.2022, 23.2.2023 ರಂದು ಮತ್ತು ನಿಪಿ141 ರಲ್ಲಿ ನಮೂದಿಸಿರುವ ದಿನಾಂಕ 26.9.2023, 3.12.2023 ಮತ್ತು 13.2.2024 ರಂದು ಅರ್ಜಿದಾರರಿಗೆ ಚಿಕಿತ್ಸೆ ನೀಡಿರುತ್ತೇನೆ. ನಿಪಿ140 ರಲ್ಲಿ ನಮೂದಿಸಿರುವ ಔಷದಿ ಚೀಟಿಗಳನ್ನು ಡಾಃ ಟಿ.ಎನ್.ಬಾಲಕೃಷ್ಣಗೌಡ ರವರು ನೀಡಿರುತ್ತಾರೆ. ಸದರಿ ಔಷದಿ ಚೀಟಿಗಳಿಗೆ ಸಂಬಂಧಿಸಿದಂತೆ ಅರ್ಜಿದಾರರಿಗೆ ಆಗಿರುವ ಗಾಯದ ಪ್ರಮಾಣ ಮತ್ತು ಸ್ವಭಾವ ನನಗೆ ಗೊತ್ತಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ140 ರಲ್ಲಿ ಪ್ರಿಸ್‌ಕ್ರಿಪ್ಷನ್ ನೀಡಿರುವ ಬಗ್ಗೆ ನನ್ನ ಸಹಿ ಇರುವುದಿಲ್ಲ

ಎಂದರೆ ಸರಿಯಲ್ಲ. ನಾನು ಜನವರಿ 2022 ರಿಂದ ಮೈಸೂರಿನ ಅಪೊಲೋ ಬಿ.ಜಿ.ಎಸ್ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿದ್ದೇನೆ. ಅರ್ಜಿದಾರರಿಗೆ ಅಪಘಾತವು ದಿನಾಂಕ 19.12.2021 ರಂದು ಆಗಿರುತ್ತದೆ ಎಂದರೆ ಸರಿ. ಅರ್ಜಿದಾರರಿಗೆ ಶಸ್ತ್ರಚಿಕಿತ್ಸೆಯನ್ನು ಹೆಚ್.ಓ.ಡಿ ಡಾಃ ಟಿ.ಎನ್.ಬಾಲಕೃಷ್ಣಗೌಡ ರವರು ಮಾಡಿರುತ್ತಾರೆ. ಅರ್ಜಿದಾರರಿಗೆ ಯಾವ ರೀತಿ ಚಿಕಿತ್ಸೆ ನೀಡಬೇಕು ಹಾಗೂ ಯಾವ ಶಸ್ತ್ರಚಿಕಿತ್ಸೆಯನ್ನು ಮಾಡಬೇಕು ಎಂದು ಹೆಚ್.ಓ.ಡಿ ರವರಿಗೆ ಗೊತ್ತಿದ್ದು ಅವರು ಸಾಕ್ಷಿ ನುಡಿಯಲು ಸಮರ್ಥರಾಗಿರುತ್ತಾರೆ ಎಂದರೆ ಸರಿ. ದಿನಾಂಕ 19.12.2021 ರಿಂದ 31.12.2021 ರವರೆಗೆ ಅರ್ಜಿದಾರರಿಗೆ ಏನೆಲ್ಲಾ ಚಿಕಿತ್ಸೆ ನೀಡಲಾಗಿರುತ್ತದೆ ಎಂದು ವೈಯಕ್ತಿಕವಾಗಿ ಗೊತ್ತಿರುವುದಿಲ್ಲ, ಆದರೆ ದಾಖಲೆಯನ್ನು ನೋಡಿ ಹೇಳಬಹುದು. ಅರ್ಜಿದಾರರಿಗೆ ಯಾವ ಚಿಕಿತ್ಸೆ ನೀಡಬೇಕು, ಯಾವ ಶಸ್ತ್ರಚಿಕಿತ್ಸೆ ಮಾಡಬೇಕು ಎಂದು ಆಸ್ಪತ್ರೆಯ ಹೆಚ್.ಓ.ಡಿ ಆದ ಡಾಃ ಟಿ.ಎನ್.ಬಾಲಕೃಷ್ಣಗೌಡ ರವರಿಗೆ ಗೊತ್ತಿರುತ್ತದೆ ಎಂದರೆ ಸಾಕ್ಷಿದಾರರು ನಾನು ಸದರಿ ಹೆಚ್.ಓ.ಡಿ ಜೊತೆ ಕೆಲಸ ಮಾಡುತ್ತಿದ್ದರಿಂದ ಮತ್ತು ನಾನು ಮೂಳೆ ತಜ್ಞನಾಗಿದ್ದರಿಂದ ನನಗೂ ಸಹ ಗೊತ್ತಿರುತ್ತದೆ ಎನ್ನುವರು. ಅರ್ಜಿದಾರರಿಗೆ ಯಾವ ಚಿಕಿತ್ಸೆ ನೀಡಬೇಕು, ಯಾವ ಶಸ್ತ್ರಚಿಕಿತ್ಸೆ ಮಾಡಬೇಕು ಎಂದು ಹೆಚ್.ಓ.ಡಿ ರವರು ತೀರ್ಮಾನ ಮಾಡಿರುತ್ತಾರೆ. ನಿಪಿ36 ಪ್ರಿಸ್‌ಕ್ರಿಪ್ಷನ್ ನಲ್ಲಿ ಮಾತ್ರ ನನ್ನ ಸಹಿ ಇರುತ್ತದೆ, ಉಳಿದ ಪ್ರಿಸ್‌ಕ್ರಿಪ್ಷನ್ ನಲ್ಲಿ ನನ್ನ ಸಹಿ ಇರುವುದಿಲ್ಲ. ನಿಪಿ36 ಪ್ರಿಸ್‌ಕ್ರಿಪ್ಷನ್ ನ್ನು ನನ್ನ ಹೆಚ್.ಓ.ಡಿ ರವರ ಸಲಹೆ ಮೇರೆಗೆ ನೀಡಿರುತ್ತೇನೆ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ 3 ರಿಂದ 5 ನೇ ಶಸ್ತ್ರಚಿಕಿತ್ಸೆಗಳ ಬಗ್ಗೆ ಪ್ಲಾಸ್ಟಿಕ್ ಸರ್ಜನ್ ರವರು ಮಾತ್ರ ನಿಖರವಾದ ಮಾಹಿತಿಯನ್ನು ಹೊಂದಿರುತ್ತಾರೆ ಎಂದರೆ ಸರಿ. ಸಾಕ್ಷಿದಾರರು ಮುಂದುವರಿದು ಮೂಳೆ ಶಸ್ತ್ರಚಿಕಿತ್ಸೆ ತಜ್ಞರು ಮತ್ತು ಪ್ಲಾಸ್ಟಿಕ್ ಸರ್ಜರಿ ತಜ್ಞರು ಒಟ್ಟಿಗೆ ಸೇರಿ ಶಸ್ತ್ರಚಿಕಿತ್ಸೆ ಮಾಡಬೇಕಾಗುತ್ತದೆ ಎನ್ನುವರು. ನಿಪಿ38 ದಾಖಲೆಯನ್ನು ಹೆಚ್.ಓ.ಡಿ ಸಹಿ ಮಾಡಿ ನೀಡಿರುತ್ತಾರೆ ಎಂದರೆ ಸರಿ. ಅರ್ಜಿದಾರರಿಗೆ ಸಹಾಯ ಮಾಡಲು ದಾಖಲಾತಿಗಳನ್ನು ಸೃಷ್ಟಿ ಮಾಡಿಕೊಂಡು ದೊಡ್ಡ ಆಸ್ಪತ್ರೆಯ ಗೌರವ ಕಾಪಾಡಲು ನಾನು ಅರ್ಜಿದಾರರ ಪರ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಸಾಕ್ಷಿ ನುಡಿಯಲು ಯಾವ ಸಾಮರ್ಥ್ಯ ಇಲ್ಲದಿದ್ದರೂ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.